## ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಪಟ್ಟಣ ಪಂಚಾಯಿತಿ ವ್ಯಾಪ್ತಿ ಯಲ್ಲಿನ ಉತ್ತಮ ಬೆಳವಣಿಗೆಗಳು

2004 ನೇ ಸಾಲಿನಲ್ಲಿ ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ ನಾಗಮಂಗಲ ಮಂಡ್ಯ ಜಿಲ್ಲೆ, ಇಲ್ಲಿಗೆ ಮುಖ್ಯಾಧಿಕಾರಿಯಾಗಿ ನಿಯೋಜನೆ ಮೇಲೆ ನೇಮಿಸಲ್ಪಟೆನು. ನಾನು ಮೂಲತಃ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಒಬ್ಬ ಅಧಿಕಾರಿ. ನಾಗಮಂಗಲ ಪಟ್ಟಣ (ಟಿ.ಪಿ) ರಾಜಕೀಯಕ್ಕೆ ಬಹಳ ಹೆಸರುವಾಸಿ. ಭಾರತದ ಚುನಾವಣಾ ಆಯೋಗದ ತೀರ್ಮಾನದಂತೆ ಅತೀ ಸೂಕ್ಷ್ಮ ಪ್ರದೇಶವೆಂದು ಘೋಷಿಸಲ್ಪಟ್ಟಿದೆ. ಸುಮಾರು 17000 ಜನಸಂಖ್ಯೆ ಹೊಂದಿರುವ ಒಂದು ಪುಟ್ಟ ಪಟ್ಟಣವಾಗಿದೆ. ರಾಜಕೀಯವಾಗಿ ಬಿಹಾರವೆಂದು ಹೆಸರು ಮಾಡಿದೆ.

2004 ರಲ್ಲಿ ಇಂದೊಂದು ಯಾವ ಮೂಲಸೌಕರ್ಯವನ್ನು ಹೊಂದಿರದ ಒಂದು ಸಣ್ಣ ಹಳ್ಳಿಯಂತೆ, ನೋಡಲು, ಕಾಣುತ್ತಿತ್ತು. ಪಟ್ಟಣ ಪಂಚಾಯಿತಿಯಲ್ಲಿ ಅರಾಜಕತೆ ತಾಂಡವಾಡುತ್ತಿತ್ತು. ನಾನು ಯಾವ ರೀತಿಯ ಬದಲಾವಣೆ ಮಾಡಲು ಸಾಧ್ಯವಾಗಲಿಲ್ಲ. ಯಾವ ಆಸೆ–ಅಮಿಷಗಳಿಗೆ ಬಲಿಯಾಗದೆ, ಜನರಿಗೆ ಉತ್ತಮ ಸೇವೆ ನೀಡಿದೆ. ಆದರೆ ಜನಪ್ರತಿನಿಧಿಗಳಿಗೆ, ರಾಜಕಾರಣಿಗಳಿಗೆ ನುಂಗಲಾರದ ತುತ್ತಾದ್ದರಿಂದ ಕೇವಲ 10 ತಿಂಗಳಲ್ಲಿ ಯಾವುದೆ ಆರೋಪಗಳಿಲ್ಲದಿದ್ದರೂ ಅಲ್ಲಿಂದ ನನ್ನನ್ನು ತೆಗೆಸಿದರು. ಈ ಅವಧಿಯಲ್ಲಿ ಯಾವುದೇ ಸುಧಾರಣೆ ತರಲು ಬದಲಾವಣೆ ಮಾಡಲು ಸಾಧ್ಯವಾಗಲಿಲ್ಲ. ಜನರಿಗೆ ನೀಡಿದ ಉತ್ತಮ ಸೇವೆಯನ್ನು ಪರಿಗಣಿಸಿ, ನಾಗಮಂಗಲದ ಜನರು ಮತ್ತೆ ನನ್ನನ್ನು 2006ರಲ್ಲಿ ಮುಖ್ಯಾಧಿಕಾರಿಯಾಗಿ ಕರೆ ತರುವಲ್ಲಿ ಯಶ್ವಸಿಯಾದರು.

2006 ರಲ್ಲಿ With the vision I came there as a chief officer to TP. ಐತಿಹಾಸಿಕ ಪ್ರಸಿದ್ದ ಪಟ್ಟಣವಾದ ನಾಗಮಂಗಲ ಮಂಡ್ಯ ಜಿಲ್ಲೆಯ ರಾಜ್ಯದಲ್ಲಿ ಪ್ರಸಿದ್ಧವಾದ 1200 ವರ್ಷಗಳ ಇತಿಹಾಸ ಹೊಂದಿರುವ ಕೇಶವಸ್ವಾಮಿ ದೇವಾಲಯ, ಯೋಗ ನರಸಿಂಹ ದೆವಾಲಯ, ಕಾಳಿಕಾಂಬ ದೇವಾಲಯ ಹಂಪಿ ಅರಸನಕೊಳ, ಇವುಗಳು ಪುರಾಣ ಪ್ರಸಿದ್ದವಾದವುಗಳು.

ಮೊದಲು ಪಟ್ಟಣವನ್ನು ಸುಂದರ ಗೊಳಿಸಲು ಒಂದು ಯೋಜನೆ ರೂಪಿಸಿದೆ. ಸಿಬ್ಬಂದಿ ಸಹಾಯದೊಡನೆ ಜನರ ಸಹಕಾರದೊಡನೆ ಅತೀಕ್ರಮಣ ತೆರವುಗೊಳಿಸಲು ಕ್ರಮ ತೆಗೆದುಕೊಂಡೆನು. ಅಧ್ಯಕ್ಷರು ಮತ್ತು ಸ್ಥಳೀಯ ಸಂಸ್ಥೆಯವರು ಈ ನನ್ನ ದೊಡ್ಡ ಕೆಲಸಕ್ಕೆ ಕೈಜೋಡಿಸಿದರು ಚುನಾಯಿತಿ ಪ್ರತಿನಿಧಿಗಳಲು ಸಂಪೂರ್ಣ ವಿರೋದವಿದ್ದರೂ ಲೆಕ್ಕಿಸದೆ, ಅತಿಕ್ರಮಣ ಜಾಗಗಳನ್ನು ತೆರೆವುಗೊಳಿಸುವಲ್ಲಿ ದಿಟ್ಟ ಕ್ರಮ ತೆಗೆದುಕೊಂಡೆ.

ಕೆ.ಎಸ್.ಟಿ ರಸ್ತೆ ಈ ಪಟ್ಟಣಕ್ಕೆ ಒಂದು ರಾಜಮಾರ್ಗವಿದ್ದಂತೆ, ಕೇವಲ 4–5 ಅಡಿಗಳಾಗಿ ಎಲ್ಲವೂ ಒತ್ತುವರಿ ಮಾಡಿ ಖಾಸಗಿಯವರು ಮನೆ ಕಟ್ಟಿಕೊಂಡು, ರಸ್ತೆಯನ್ನು ಮುಚ್ಚಿದ್ದರು ದೇವಸ್ಥಾನ ನೋಡಲು ಬಂದ ಪ್ರವಾಸಿಗರಿಗೆ ಒಂದು ಕಾರೂ ಸಹ ಸುಲಭವಾಗಿ ಹೋಗಲು ಕಷ್ಟವಾಗಿತ್ತು. ಹಲವಾರು ಪ್ರಯತ್ನಗಳ ಫಲವಾಗಿ 12 ಮೀಟರಿಗೆ ಈ ರಸ್ತೆ ವಿಸ್ತರಿಸಲು ಕ್ರಮತೆಗೆದು ಕೊಂಡೆ.

ಸಾರ್ವಜನಿಕರು, ಸಂಘ ಸಂಸ್ಥೆಗಳಿಂದ ಸಹಕಾರ ಶಿಫಾರಸ್ಸು ರಕ್ಷಣೆಯಲ್ಲಿ ನನಗೆ ಸಾಗರದಂತೆ ಹರಿದು ಬಂದು ನನಗೆ ಸ್ಪೂರ್ತಿ ಹೆಚ್ಚಾಗಿ ಶಕ್ತಿಯೇ ಬಂದಂತಾಯಿತು. ಕೆಲವು ಕಾಂಗ್ರೆಸ್ ರೂಲಿಂಗ್ ಕೌನ್ಸಿಲ್ ಮನೆಗಳ ಸಮೇತ ಲೆಕ್ಕಿಸದೆ 12 ಮೀಟರ್‌ಗೆ ರಸ್ತೆ ವಿಸ್ತರಿಸುವಲ್ಲಿ ಯಶಸ್ವಿಯಾದೆ.

ಜೆ.ಸಿ.ಬಿ, ಇಟಾಚಿ, ಟಿಪ್ಪರ್ ಗಳನ್ನು ಬಳಸಿ ಸುಮಾರು 3 ದಿನಗಳ ಕಾರ್ಯಚರಣೆಯಿಂದ ಒಂದು ವಿಶಾಲರಸ್ತೆ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾದೆನು. ಇದೇ ಸಂದರ್ಭದಲ್ಲಿ ಮಂಡ್ಯ ರಸ್ತೆ ಅಗಲೀಕರಣವನ್ನು

ಮಾಡಿದೆ. ಇದರ ಪರಿಣಾಮವಾಗಿ ಎರಡು ಮುಖ್ಯ ರಸ್ತೆಗಳು ಅಗಲೀಕರಣ ಮಾಡಿದೆನು. ಜಿಲ್ಲಾಡಳಿತ ಮತ್ತು ಪೋಲಿಸರು ನೀಡಿದ ಸಹಕಾರದಿಂದಾಗಿ ಅಗಲೀಕರಣ ಕಾರ್ಯಾಚರಣೆ ಯಶಸ್ವಿಯಾಯಿತು.

ಅದೃಷ್ಟವಶಾತ್ ಅದೇ ಕ್ಷೇತ್ರದ ಶಾಸಕರು ಜಿಲ್ಲಾ ಉಸ್ತುವಾರಿ ಸಚಿವರು ಆದರು ಯತ್ತೇಚ್ಛವಾಗಿ ಹಣ ಹರಿದು ಬಂದಿದರಿಂದ ಪಟ್ಟಣ ಅಭಿವೃದ್ಧಿಮಾಡಲು ಸಹಕಾರಿಯಾಯಿತು. ಕೆ.ಎಸ್.ಟಿ ಮುಖ್ಯರಸ್ತೆಯಿಂದ ದೇವಸ್ಥಾನದ ವರೆಗೆ ಸುಮಾರು 400ಮೀಟರ್ ಕಾಂಕ್ರಿಟ್ ರಸ್ತೆ ಮಾಡುವಲ್ಲಿ ಯಶಸ್ವಿಯಾದೆನು. ಪುರಸಭಾ ವ್ಯಾಪ್ತಿಯೊಳಗೆ ಬರುವ ಬೀದರ್–ಬೆಂಗಳೂರು ಹೆದ್ದಾರಿ ರಸ್ತೆಯಲ್ಲಿ ರಸ್ತೆ ವಿಭಜಕ ನಿರ್ಮಾಣ ಮಾಡಲಾಯಿತು ಹಾಗೂ "ಸೆಂಟರ್ ಮೀಡಿಯಾ ಲೈಟ್ಸ್" ಗಳನ್ನು ಅಳವಡಿಸಲಾಯಿತು. ಪ್ರಸಿದ್ಧ ಹಂಪೆ ಅರಸನ ಕೊಳ್ಳ ಸಂಪೂರ್ಣವಾಗಿ ಮುಚ್ಚಿಹೊಗಿತ್ತು ಸುಮಾರು ₹10,000/– ವೆಚ್ಚದಲ್ಲಿ ಅದನ್ನು ಜೀರ್ಣೋದ್ಧಾರ ಪಡಿಸಲಾಯಿತು. ಇಡೀ ರಾಜ್ಯದಲ್ಲಿ ಮಾದರಿಯಾದ ಮಿನಿ ವಿಧಾನಸೌಧ, ತಾಲೂಕು ಕಛೇರಿ, ಜೂನಿಯರ್ ಕಾಲೇಜು ಹೀಗೆ ಹಲವಾರು ಕಾಮಗಾರಿಗಳು ನಿರ್ಮಾಣ ಗೊಂಡವು.

ನಾನು ಕೈಗೊಂಡ ಕೆಲವು ಕಾಮಗಾರಿಗಳಿಂದ ಉತ್ತಮ ಸೇವೆಯಿಂದ ಒಂದು ಸಣ್ಣಹಳ್ಳಿಯಂತಿದ್ದ ನಾಗಮಂಗಲ ಪಟ್ಟಣ ಒಂದು ಸುಂದರ ಪಟ್ಟಣವಾಗಿ ಮಾರ್ಪಟ್ಟಿದೆ ಇದಾದನಂತರ ಅತಿಕ್ರಮಿಸಿದ ಕಟ್ಟಡ ತೆರವುಗೊಸಿದ್ದರಿಂದ ಇತ್ತ ಸದಸ್ಯರು ತುರ್ತುಸಭೆ ಕರೆದು ಈ ಎಲ್ಲಾ ಅನಾಹುತಗಳಿಗೆ ಸುಮಾರು 1.60 (ಒಂದು ಕೋಟಿ ಅರವತ್ತು ಲಕ್ಷ) ರೂಪಾಯಿಗಳಷ್ಟು ನಷ್ಟ ಉಂಟುಮಾಡಿದ ಮುಖ್ಯಾಧಿಕಾರಿ ಅನ್ನದಾನಿಯವರನ್ನು ಸೇವೆಯಿಂದ ತೆಗೆದುಹಾಕಬೇಕು ಎಲ್ಲಾ ನಷ್ಟಗಳನ್ನು ಇವರೇ ಭರಿಸಬೇಕೆಂದು ಸಭೆ ಸರ್ವಾನುಮತದಿಂದ ತೀರ್ಮಾನಿಸಿದರು.

ಮಾನ್ಯ ಜಿಲ್ಲಾಡಳಿತ ನಾನು ಸಾರ್ವಜನಿಕ ಹಿತಾದೃಷ್ಟಿಯಿಂದ ಮಾಡಿದ ಸುಧಾರಣೆಯನ್ನು ಪರಿಗಣಿಸಿ ಕೌನ್ಸಿಲ್ ನನ್ನ ವಿರುದ್ಧ ಮಾಡಿದ ನಡವಳಿಯನ್ನು ರದ್ದುಗೊಳಿಸಿ ಆದೇಶ ಮಾಡಿದರು ಕೌನ್ಸಿಲ್‌ನ ಕೆಲವು ಕಿಡಿಗೇಡಿಗಳು ಮತ್ತೆ ನನ್ನನ್ನು 2006ರಲ್ಲಿ ಕೇವಲ 1ವರ್ಷದ ಅವಧಿಯಲ್ಲಿ ಅಲ್ಲಿಂದ ವರ್ಗಾಯಿಸಿದರು. ಮತ್ತೆ ಜನರ ಹಾಗೂ ಸಾರ್ವಜನಿಕರ ಒತ್ತಡಕ್ಕೆ ಮಣಿದು ಸರ್ಕಾರ 2010ರಲ್ಲಿ ಮುಖ್ಯಾಧಿಕಾರಿಯಾಗಿ ಪಟ್ಟಣ ಪಂಚಾಯಿತಿ ನಾಗಮಂಗಲಕ್ಕೆ ಆದೇಶ ಹೊರಡಿಸಿತು. 2010ರಲ್ಲಿ ಮುಖ್ಯಾಧಿಕಾರಿಯಾಗಿ ಬಂದ ಮೇಲೆ ಈ ಹಿಂದೆ ನಾನು ರೂಪಿಸಿದ್ದ ಯೋಜನೆಗಳು ಅಪೂರ್ಣವಾಗಿದ್ದವು ಅವುಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲು ಕ್ರಮ ತೆಗೆದುಕೊಂಡೆನು ಪಟ್ಟಣದ ಎಲ್ಲಾ ರಸ್ತೆಗಳು ಡಾಂಬರೀಕರಣ – ಕಾಂಕ್ರೀಟ್ ರಸ್ತೆಗಳನ್ನಾಗಿ ಮಾಡುವ ಕಾರ್ಯತೆಗೆದು ಕೊಂಡೆನು ಶೇ98% ರಸ್ತೆಗಳು ಸಿಮೆಂಟ್/ಕಾಂಕ್ರಿಟ್‌ನಿಂದ ಹಾಗೂ ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳಲಾಯಿತು. ಈಗ ಒಂದು ಸುಂದರ ಪಟ್ಟಣವಾಗಿ ಮಾರ್ಪಟ್ಟಿದೆ ಕ್ರೀಡಾಂಗಣ ನಿರ್ಮಾಣ ಮಾಡಲು ಜಾಗ ನೀಡುವಲ್ಲಿ ಸಫಲನಾದೆನು. ಮಾನ್ಯ ಸಚಿವರ ಕೃಪೆಯಿಂದ ಹಾಗೂ ನನ್ನ ನಿರಂತರ ಪ್ರಯತ್ನಗಳ ಫಲವಾಗಿ ಯು.ಜಿ.ಡಿ ನಿರ್ಮಾಣ ಮಾಡಲಾಯಿತು ಈಗ ನಾಗಮಂಗಲ ಎಲ್ಲಾ ಮೂಲಸೌಕರ್ಯ ಹೊಂದಿದ ಪಟ್ಟಣವಾಗಿರುತ್ತದೆ.

2010ರಲ್ಲಿ ಮತ್ತೆ ಕೆ.ಎಂ.ಆರ್.ಪಿ ಯೋಜನೆಯನ್ನು ತರುವಲ್ಲಿ ಹಲವಾರು ಸಭೆಗಳಿಗೆ ಹಾಜರಾಗಿ ಸಫಲನಾದೆನು ಆಯ್ದ ಕೆಲವು ರಸ್ತೆಗಳು ಮತ್ತು ಮಳೆ ನೀರು ಕೊಯ್ಲು ಪದ್ಧತಿ ತರಲು ಸಕಲ ಸಿದ್ಧತೆ ಮಾಡಿರುತ್ತೇನೆ ಮತ್ತೆ 2010ರಲ್ಲಿ ಮಾಡಿದ ಪುರಸಭೆ ಮಳಿಗೆಗಳು ಶಿಥಿಲವಾಗಿದ್ದು ಜನಪ್ರತಿನಿಧಿಗಳ ತುಂಬಾ ಪ್ರತಿರೋದಗಳ ನಡುವೆಯೇ ಲೆಕ್ಕಿಸದೆ ಸುಮಾರು 30 ಮಳಿಗೆಗಳನ್ನು ತೆರವುಗೊಳಿಸಲು ಕ್ರಮ ಕೈಗೊಂಡೆನು ಕೆಲವು ಮಳಿಗೆಗಳ ಮಾಲಿಕರು ಮತ್ತೆ ನನ್ನನ್ನು ಅಲ್ಲಿಂದ ವರ್ಗಾವಣೆ ಮಾಡಲು ಒತ್ತಡ ಮಾಡಿ ವರ್ಗಾಯಿಸಿದರು.

ಎಲ್ಲಾ ಮೂಲ ಸೌಕರ್ಯಗಳನ್ನು ಒದಗಿಸಲು ಸಫಲವಾಗಿರುತ್ತೇನೆ. ಈಗ ನಾಗಮಂಗಲ ಒಂದು ಮಾದರಿ ಪಟ್ಟಣವಾಗಿದೆ. ಬೇಕೆಂದರೆ ವೆಬ್ಬ್ ಸೈಟಿನಲ್ಲಿ ಕುಳಿತಲ್ಲೆ ನೋಡಬಹುದು ಆದರೆ 2 ಕಾಮಗಾರಿಗಳು ಮಾತ್ರ ಬಾಗಿ ಉಳಿದಿರುತ್ತವೆ. ಈ ಹಿಂದೆ 2006 ರಲ್ಲಿ ಸೂಪರ್ ಮಾರ್ಕೆಟ್ ನಿರ್ಮಾಣ ಮಾಡಲು ಲೋಕೋಪಯೋಗಿ ಇಲಾಖೆಗೆ ಸುಮಾರು 53 ಲಕ್ಷಗಳನ್ನು ಮುಂಗಡವಾಗಿ ನೀಡಿದ್ದೆ ಸ್ಥಳೀಯ ರಾಜಕಾರಣಿಗಳ ಪ್ರತಿಷ್ಠೆಯಿಂದ ನಿರ್ಮಾಣ ಕಾರ್ಯವಾಗದೆ ಉದ್ಘಾಟನೆಯಾಗದೆ ಹಾಗೆ ಉಳಿದೆದೆ.

**<u>ಉಪಸಂಹಾರ:</u>**

ಹೀಗೆ 2004 ರಲ್ಲಿ ಒಂದು ಪುಟ್ಟ ಹಳ್ಳಿಯಂತಿದ್ದ ನಾಗಮಂಗಲ ಪಟ್ಟಣ ಇಂದು ಮಾದರಿ ಪಟ್ಟಣವಾಗಿ ನಿರ್ಮಾಣವಾಗಿದೆ. ಸುಂದರವಾದ ಬೀದಿ ದಿಪಗಳನ್ನು ಅಳವಡಿಸಲಾಗಿದೆ. ಕುಡಿಯುವ ನೀರು ಸಮರ್ಪಕವಾಗಿದೆ. ಶೇ98 ರಷ್ಟು ರಸ್ತೆಗಳು ಟಾರ್ ಹಾಗೂ ಕಾಂಕ್ರೀಟ್ ರಸ್ತೆಗಳಿಂದ ನಿರ್ಮಾಣವಾಗಿದೆ. ಯು.ಜಿ.ಡಿ ಸೌಲಭ್ಯ ಕಲ್ಪಿಸಲಾಗಿದೆ. ತೆರಿಗೆ ವಸೂಲಾತಿಯಲ್ಲಿ ಮಾರ್ಪಾಡು ಮಾಡಿರುತ್ತೇನೆ ಸಾಧ್ಯವಾದಷ್ಟು ಪ್ರಮಾಣಿಕ ಸೇವೆ ನೀಡಿದ್ದರಿಂದ ಜನಸಾಮಾನ್ಯರ ಪ್ರೀತಿಗೆ ಪಾತ್ರನಾಗಿರುತ್ತೆನೆ. ಪುನಃ ಜನರು ನನ್ನನು ಕರೆತಂದು 2006ರಲ್ಲಿ "ಸೂಪರ್ ಮಾರ್ಕೇಟ್" ನಿರ್ಮಾಣ ಮಾಡಲು ನಾಂದಿಯಾಡಲು ಜನರು 4ನೇ ಬಾರಿಗೆ ಕರೆತರಲು ಒತ್ತಡ ಹೇರುತಿದ್ದಾರೆ.